# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಶುಕ್ರವಾರ, ೧೦, ಏಪ್ರಿಲ್, ೨೦೨೬ (ಚೈತ್ರ, ೨೦, ಶಕವರ್ಷ, ೧೯೪೮)<br>BENGALURU, FRIDAY, 10, APRIL, 2026 (CHAITHRA, 20, SHAKAVARSHA, 1948) | ನಂ. ೨೬೮<br>No. 268 |
|---|---|---|

## ಕರ್ನಾಟಕಸರ್ಕಾರ

ಸಂಖ್ಯೆ: ಇಪಿ 82 ಎಸ್‌ಎಲ್‌ಬಿ 2026

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:10.04.2026

## ಅಧಿಸೂಚನೆ

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಕಾಯ್ದೆ, 1966 (1966ರ ಕರ್ನಾಟಕ ಅಧಿನಿಯಮ ಸಂಖ್ಯೆ16) ಸೆಕ್ಷನ್ 33 ಮತ್ತು ಸೆಕ್ಷನ್ 34 ರ ಪ್ರಕರಣಗಳ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ಮೊದಲ ನಿಯಮಾವಳಿಗಳು, 1966 ಗೆ ಕೆಳಗಿನಂತೆ ಕರಡು ತಿದ್ದುಪಡಿ ನಿಯಮಗಳನ್ನು ಪ್ರಕಟಿಸಲಾಗಿರುತ್ತದೆ. ಇದರಿಂದ ಪರಿಣಾಮ ಬೀರುವ ಎಲ್ಲಾ ವ್ಯಕ್ತಿಗಳ ಮಾಹಿತಿಗಾಗಿ ಮತ್ತು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟವಾದ ದಿನಾಂಕದಿಂದ 07 ದಿನಗಳ ಅವಧಿ ಮುಗಿದ ನಂತರ ಸದರಿ ಕರಡು ನಿಯಮಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುವುದು ಎಂದು ಸೂಚನೆ ನೀಡಲಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿ ಮುಕ್ತಾಯಗೊಳ್ಳುವ ಮೊದಲು ಸದರಿ ಕರಡು ಅಧಿಸೂಚನೆಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಯಿಂದ ರಾಜ್ಯ ಸರ್ಕಾರಕ್ಕೆ ಸ್ವೀಕೃತವಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಯನ್ನು ರಾಜ್ಯ ಸರ್ಕಾರವು ಪರಿಗಣಿಸುತ್ತದೆ. ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕೊಠಡಿ ಸಂಖ್ಯೆ: 663, 6ನೇ ಮಹಡಿ, 2ನೇ ಗೇಟ್, ಬಹುಮಹಡಿಗಳ ಕಟ್ಟಡ, ಡಾ: ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು-560001 ಇಲ್ಲಿಗೆ ಸಲ್ಲಿಸಬಹುದು.

## ಕರಡು ನಿಯಮಗಳು

1. **ಶೀರ್ಷಿಕೆ ಮತ್ತು ಪ್ರಾರಂಭ**. ಈ ನಿಯಮಗಳನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಮೊದಲ ನಿಯಮಗಳು (ಎರಡನೇ ತಿದ್ದುಪಡಿ), 2026 ಎಂದು ಕರೆಯತಕ್ಕದ್ದು ಹಾಗೂ ಕೂಡಲೇ ಜಾರಿಗೆ ಬರತಕ್ಕದ್ದು.

2. **ಅನುಬಂಧ III ರ ತಿದ್ದುಪಡಿ.** ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಮೊದಲ ನಿಯಮಾವಳಿಗಳು, 1966, ಅನುಬಂಧ ||| ರಲ್ಲಿ,

(i) ನಿಯಮ 16 ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳಿಗೆ, ಈ ಕೆಳಗಿನಂತೆ ಪ್ರತಿಯೋಜಿಸತಕ್ಕದ್ದು,

"16. ಎಸ್ಎಸ್ಎಲ್ಸಿ ಪರೀಕ್ಷೆಯನ್ನು ಆರು ವಿಷಯಗಳಿಗೆ ಒಟ್ಟು 625 ಅಂಕಗಳಿಗೆ ನಡೆಸಲಾಗುತ್ತದೆ. ಇದರಲ್ಲಿ ತೃತೀಯ ಭಾಷೆ ಮತ್ತು ಎನ್ಎಸ್ಕ್ಯೂಎಫ್ ವಿಷಯಗಳಲ್ಲಿ ಪಡೆದ ಅಂಕಗಳನ್ನು ಶ್ರೇಣಿಗಳ (ಗ್ರೇಡ್) ರೂಪದಲ್ಲಿ ಪ್ರಕಟಿಸಲಾಗುತ್ತದೆ. ಈ ವಿಷಯಗಳನ್ನು ಅಂಕಪಟ್ಟಿಯಲ್ಲಿ ಹೆಚ್ಚುವರಿ ವಿಷಯಗಳಾಗಿ ನಮೂದಿಸಬೇಕು ಮತ್ತು ಉತ್ತೀರ್ಣರಾಗಲು ಪರಿಗಣಿಸಲಾಗುವುದಿಲ್ಲ. ಇದು 2025-26ನೇ ಸಾಲಿನ ಎಸ್ಎಸ್ಎಲ್ಸಿ ಪರೀಕ್ಷೆಯಿಂದ ಜಾರಿಗೆ ಬರುವುದು.

ಎ) ಅಭ್ಯರ್ಥಿಯು ತೃತೀಯ ಭಾಷೆ ಮತ್ತು ರಾಷ್ಟ್ರೀಯ ಕೌಶಲ್ಯ ಅರ್ಹತಾ ಚೌಕಟ್ಟಿನ ವಿಷಯಗಳಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಫಲಿತಾಂಶವನ್ನು ಈ ಕೆಳಗಿನ ಶ್ರೇಣಿಗಳಲ್ಲಿ (ಗ್ರೇಡ್) ಘೋಷಿಸಲಾಗುತ್ತದೆ;

| **ಶೇಕಡಾವಾರು** | **ಶ್ರೇಣಿ** |
|---|---|
| 80 ರಿಂದ 100 ರವರೆಗೆ | ಎ |
| 50 ರಿಂದ 79 ರವರೆಗೆ | ಬಿ |
| 49 ರವರೆಗೆ | ಸಿ |

(ಬಿ) ಅಭ್ಯರ್ಥಿಗಳು ಆಂತರಿಕ ಮೌಲ್ಯಮಾಪನ ಮತ್ತು ಬಾಹ್ಯ ಪರೀಕ್ಷೆ ಒಟ್ಟಾರೆಯಾಗಿ ಶೇಕಡಾ 33 ಅಂಕಗಳನ್ನು ಪಡೆಯಬೇಕು ಮತ್ತು ಅವರು ಒಟ್ಟು 525 ಅಂಕಗಳಲ್ಲಿ ಕನಿಷ್ಠ 173 ಅಂಕಗಳನ್ನು ಗಳಿಸುವುದರೊಂದಿಗೆ ಆಯಾ ವಿಷಯದ ಒಟ್ಟು ಅಂಕಗಳಲ್ಲಿ ಪ್ರತಿ ವಿಷಯದಲ್ಲಿ ಕನಿಷ್ಠ 30 ಪ್ರತಿಶತ ಅಂಕಗಳನ್ನು ಗಳಿಸಿದರೆ ಅಂತಹ ಅಭ್ಯರ್ಥಿಗಳನ್ನು ಉತ್ತೀರ್ಣರೆಂದು ಘೋಷಿಸಲಾಗುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್ ಪ್ರಕಾಶ)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರೌಢ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

**Government of Karnataka**

No: EP 82 SLB 2026

Government of Karnataka
Secretariat
Multi-Storied Building,
Bengaluru, Date:10.04.2026

## Notification

The draft of the following Regulations further to amend the Karnataka Secondary Education Examination Board First Regulations, 1966, which the Government of Karnataka proposes to make in exercise of the powers conferred by Section 26 read with sections 33 and 34 of the Karnataka School Examination and Assessment Board Act, 1966 (Karnataka Act No. 16 of 1966) is hereby published as required under section 34 of said Act for information of all persons likely to be affected thereby and notice is hereby given that the said draft will be taken up for consideration after Seven (07) days from the date of its publication in the official Gazette.

Any objection or suggestion which may be received by the State Government from any person in respect of the said draft before the period specified above will be considered by the State Government. The objections or suggestions may be addressed to the Additional Chief Secretary to Government, Department of School Education and Literacy, R.No. 663, 6th Floor, 2nd Gate, Multi Storied Building, Dr. B.R. Ambedkar Veedhi, Bengaluru-560001.

## DRAFT RULES

1. **Title and Commencement**.-These regulations may be called the Karnataka Secondary Education Examination Board First, (Second Amendment) Regulations, 2026 and will be applicable with immediate effect.

2. **Amendment of Annexure III**.- In the Karnataka Secondary Education Examination Board First Regulations, 1966, in Annexure III,-

(i) for item 16 and the entries relating thereto, the following shall be substituted, namely: -

"16. The SSLC examination shall be conducted for six subjects with a total of 625 marks. In this, the marks obtained in the third language/National Scheme Qualification Frame Work (NSQF) subjects shall be declared in the form of grades. These subjects shall be entered as additional subjects in the marks card and are not to be considered for passing with effect from 2025-26 SSLC exam.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



a) Based on the marks obtained by the candidate in the third language and National Skills Qualification Framework (NSQF) subjects, results shall be pronounced in the following grades namely:-

| **Percentage** | **Grade** |
|---|---|
| 80 to 100 | A |
| 50 to 79 | B |
| Upto 49 | C |

b) Candidates shall secure an aggregate of 33 percent marks in internal assessment and external examination combined and shall be declared pass if they secure at least 173 marks out of a total of 525 marks, including at least 30 percent marks in each subject out of the total marks of the respective subject".

By order and in the name of
Governor of Karnataka

(S. PRAKASHA)
Under Secretary to Government
(Secondary)
Department of School Education and Literacy

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH